ತಮ್ಮ ತಾಯಿಯ ದಾಖಲೆ ಮುರಿಯುವ ಸಂಭ್ರಮ ಜಿ.ವಿ ಅವರಿಗಿತ್ತು. ಕಳೆದ ವರ್ಷ ಆಗಸ್ಟ್ 23ಕ್ಕೆ ಅವರು ಅದನ್ನು ಮುರಿದಾಗ ಅಭಿನಂದಿಸಬೇಕು ಎನ್ನುವ ಆಸೆ ನನಗೆ ಬಹಳಷ್ಟಿತ್ತು. ಆದರೆ, ಆಗಲೂ ಕೊರೊನಾ ಅಬ್ಬರಿಸುತ್ತಿತ್ತು. ಮನೆಗೆ ಹೋಗುವುದು ಸರಿಯಲ್ಲ ಎನ್ನಿಸಿ ದೂರವಾಣಿಯ ಮೂಲಕವೇ ಅಭಿನಂದನೆ ಹೇಳಿದ್ದೆ. ಅವರ ಮಗ ಅರುಣ ಹೇಳುವಂತೆ ಅವರಿಗೆ ಕೊರೊನಾದಿಂದ ಆಗಿರುವ ಸಂಕಷ್ಟದ ಸ್ಥಿತಿಯನ್ನು ಅರ್ಥ ಮಾಡಿಸುವುದೇ ಕಷ್ಟವಾಗಿತ್ತು. ಯಾವಾಗಲೂ ಮನೆಗೆ ಯಾರಾದರೂ ಬರುತ್ತಿದ್ದರು. ಈಗ ಏಕೆ ಬರುತ್ತಿಲ್ಲ ಎನ್ನುವ ಪ್ರಶ್ನೆಯನ್ನು ಅವರು ಪದೇಪದೇ ಕೇಳುತ್ತಿದ್ದರು. 'ಮನುಷ್ಯರು ಮನುಷ್ಯರ ಮುಖ ನೋಡದೆ ಬದುಕುವುದು ಎಂತಹ ಕಾಲವಯ್ಯ' ಎಂದು ಹೇಳುತ್ತಿದ್ದರು. ಕೊರೊನಾ ತಂದ ಖಿನ್ನತೆ ಕೂಡ ಅವರ ಆರೋಗ್ಯದ ಮೇಲೆ ಪ್ರಭಾವ ಬೀರಿತ್ತು.

## ವಿದ್ಯಾಭ್ಯಾಸದ ಗೋಲ್ಡನ್ ಪಿರಿಯಡ್

'ನನ್ನ ವಿದ್ಯಾಭ್ಯಾಸ ಕಾಲ ಗೋಲ್ಡನ್ ಪಿರಿಯಡ್, ಆಗ ಎಂತೆಂತಹ ವಿದ್ವಾಂಸರು ಇದ್ದರು' ಎಂದು ಜಿ.ವಿ ಸದಾ ಹೇಳುತ್ತಿದ್ದರು. ಅವರು ಎಸ್ಸೆಸ್ಸೆಲ್ಸಿ ಮಾಡಿದ್ದು ಮಧುಗಿರಿಯಲ್ಲಿ. ಇಲ್ಲಿ ಅವರು ಸ್ಕೌಟ್ ವಿಭಾಗದಲ್ಲಿ ಹೆಸರನ್ನು ಮಾಡಿದ್ದರು. ಇವರು ಓದುತ್ತಿರುವಾಗಲೇ ಮಹಾತ್ಮ ಗಾಂಧಿಯವರು ಮಧುಗಿರಿಗೆ ಬಂದರು. ಬಾಯ್ಸ್ ಸ್ಕೌಟ್ ಲೀಡರ್ ಆಗಿದ್ದ ಜಿ.ವಿಯವರಿಗೆ ಗಾಂಧೀಜಿಗೆ ಖಾಸಾ ಸ್ವಯಂ ಸೇವಕನಾಗುವ ಅವಕಾಶ ಸಿಕ್ಕಿತು. ಗಾಂಧೀಜಿ ತಮಗೆ ಹಾಕಿದ ನೂಲಿನ ಹಾರಗಳನ್ನು ಎತ್ತಿಡುವಂತೆ ಜಿ.ವಿಯವರಿಗೆ ನೀಡುತ್ತಿದ್ದರಂತೆ. 'ಒಂದು ಹಾರವನ್ನು ಜೇಬಿಗೆ ಹಾಕಿಕೊಂಡಿದ್ದರೂ ಇಂದು ಸಾಕಷ್ಟು ಪ್ರಸಿದ್ಧಿಯನ್ನು ಪಡೆಯಬಹುದಿತ್ತು' ಎಂದು ಜಿ.ವಿ ಈ ಘಟನೆಯನ್ನು ನೆನಪಿಸಿಕೊಂಡು ಜೋಕ್ ಮಾಡುತ್ತಿದ್ದರು. ಗಾಂಧೀಜಿಯ ಒಡನಾಟದಲ್ಲಿ ಅವರಿಗೆ ನೆನಪಿರುವ ಇನ್ನೊಂದು ಘಟನೆ ಎಂದರೆ, ಅವರು ಬುಟ್ಟಿ ಹಿಡಿದು ಸಾಗಿದರೆ ಜನರು ತಮ್ಮ ಮೈಮೇಲೆ ಇದ್ದ ಒಡವೆಗಳನ್ನು ಬಿಚ್ಚಿ ಅದಕ್ಕೆ ಹಾಕಿ ಬಿಡುತ್ತಿದ್ದರು.

ಜಿ.ವಿಯವರು ಮುಂದೆ ಮೈಸೂರಿನಲ್ಲಿ ಇಂಟರ್ ಮೀಡಿಯಟ್ ಮುಗಿಸಿ, ಮಹಾರಾಜ ಕಾಲೇಜಿನಲ್ಲಿ ಪದವಿ ಕಲಿತು, ಮೈಸೂರು ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದರು. ಅವರಿಗೆ ಟಿ.ಎಸ್. ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿ, ಬಿ.ಎಂ.ಶ್ರೀ, ತೀ.ನಂ.ಶ್ರೀ, ಸಿ.ಆರ್. ನರಸಿಂಹ ಶಾಸ್ತ್ರಿ, ಡಿ.ಎಲ್. ನರಸಿಂಹಾಚಾರ್ ಅವರಂತಹ ಗುರುಗಳು ದೊರಕಿದರು. 'ನಾನು ಸಂಕೋಚದ ವ್ಯಕ್ತಿ. ಯಾರೊಂದಿಗೂ ಹೆಚ್ಚು ಬೆರೆಯುತ್ತಿರಲಿಲ್ಲ. ಇದರಿಂದಾಗಿ ಅಂತಹ ಮೇರು ವ್ಯಕ್ತಿಗಳು ಗುರುಗಳಾಗಿದ್ದರೂ ನಾನು ಅವರಿಂದ ಪಡೆಯ ಬೇಕಾದಷ್ಟನ್ನು ಪಡೆಯಲಿಲ್ಲ' ಎನ್ನುತ್ತಿದ್ದರು ವೆಂಕಟಸುಬ್ಬಯ್ಯ.

ಕನ್ನಡ ಸ್ನಾತಕೊತ್ತರ ಪದವಿಯನ್ನು ಕೇಣಿ ಸಿದ್ದಪ್ಪ ಸುವರ್ಣ ಪದಕ ಮತ್ತು ಹೊನ್ನಶೆಟ್ಟಿ ಬಹುಮಾನಗಳ ಮೂಲಕ ಅವರು ಪ್ರಥಮ ಸ್ಥಾನದೊಂದಿಗೆ ಪಡೆದುಕೊಂಡರು. ಸ್ನಾತಕೊತ್ತರ ಪದವಿಯ ಮೌಖಿಕ ಪರೀಕ್ಷೆಯಲ್ಲಿ ಬಿ.ಎಂ.ಶ್ರೀ, ಟಿ.ಎಸ್. ವೆಂಕಟಣ್ಣಯ್ಯ ಮತ್ತು ಬೆನಗಲ್ ರಾಮರಾವ್ ಇದ್ದರು. ಅವರು ಸುದೀರ್ಘ ಪರೀಕ್ಷೆಯ ನಂತರ 'ಕನ್ನಡವನ್ನು ನಿಮ್ಮ ಕೈಯಲ್ಲಿ ಇಟ್ಟಿದ್ದೇವೆ ಕಾಪಾಡಿ' ಎಂದು ಕೇಳಿಕೊಂಡರು. ಅದನ್ನು ಅಕ್ಷರಶಃ ವೆಂಕಟಸುಬ್ಬಯ್ಯನವರು ತಮ್ಮ ಜೀವನದಲ್ಲಿ ನಡೆಸಿಕೊಂಡು ಬಂದರು. ಅವರಿಗೆ 1938ರ ಏಪ್ರಿಲ್ 25ರಂದು ಬಿ.ಎಂ.ಶ್ರೀ ನೀಡಿದ ಮೆಚ್ಚಿಗೆ ಪತ್ರದಲ್ಲಿ ಹೀಗೆ ಬರೆಯುತ್ತಾರೆ: 'ವೆಂಕಟಸುಬ್ಬಯ್ಯನವರನ್ನು ನಾನು ಕಳೆದ ಐದು ವರ್ಷಗಳಿಂದಲೂ ಬಲ್ಲೆ. ಅವರು ಕನ್ನಡ ಮತ್ತು ಇಂಗ್ಲಿಷ್ ಸಾಹಿತ್ಯದಲ್ಲಿ ಪರಿಣತಿ ಪಡೆದವರು.